ಅಲ್ಲಿ 30 ಎಕರೆ ಸರ್ಕಾರಿ ಜಮೀನು ಇದೆ. ಸುತ್ತಲೂ ಅವರು ಲೇಔಟ್‌ಮಾಡಿಬಿಟ್ಟಿದ್ದಾರೆ. ಅಲ್ಲಿಯೂ ಕೂಡ ಒಂಭೈನೂರು ಸೈಟುಗಳನ್ನು ಮಾಡಿ ಹಂಚಿದ್ದಾರೆ. ಇದರ ಬಗ್ಗೆ ಏಕೆ ಬಿ.ಡಿ.ಎ. ಗಮನಹರಿಸುವುದಿಲ್ಲ? ನಾನು ಹೇಳುವುದು ಏನೆಂದರೆ ಬಿ.ಡಿ.ಎ.ಯವರು ಎಲ್ಲಿ ಆಸಕ್ತಿ ವಹಿಸಬೇಕು? ಯಾವುದರ ಬಗ್ಗೆ ಜಾಸ್ತಿ ಕಾಳಜಿ ವಹಿಸಬೇಕು ಅದರ ಬಗ್ಗೆ ಅವರಿಗೆ ಕಾಳಜಿ ಇಲ್ಲ. ಪಾಪ, ಯಾರು ಬಡವರು, ಅಮಾಯಕರು ಇದ್ದಾರೆ ' ಮಾರಿಕಣ್ಣು ಹೋರಿ ಮ್ಯಾಲೆ ' ಎನ್ನುವಂತೆ ಅವರಿಗೆ ತೊಂದರೆ ಕೊಡುತ್ತಿದ್ದಾರೆ . ಪಾಪ, ಯಾರೋ ಕುರಿಗಳು ಸಿಗುತ್ತಾರೆ, ಅಮಯಕರು ಸಿಗುತ್ತಾರೆ ಅವರ ಮೇಲೆ ಪರಾಕ್ರಮ ತೋರಿಸುವುದಲ್ಲ. ಅದರ ಬದಲು ಹುಲಿ, ಚಿರತೆಗಳ ಮೇಲೆ ಹೋದರೆ ಸ್ವಲ್ಪ ಬಿ.ಡಿ.ಎ.ಯವರಿಗೆ ಗೊತ್ತಾಗುತ್ತದೆ ಏನು ಎನ್ನುವುದು. ಮೊದಲು ಅಂಥವರ ಮೇಲೆ ಹೋಗಿ ಆಮೇಲೆ ಬಡವರ ಬಗ್ಗೆ ಬನ್ನಿ. ಇಷ್ಟು ಹೇಳಿ ಇವತ್ತು ಯಾರು ನಿಜವಾಗಿ ಬಡವರು ರೆವಿನ್ಯೂ ಸೈಟುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅವರಿಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಡಬೆಕು. ಬಡವರು ಯಾರು ಆರ್.ಸಿ.ಸಿ. ಮನೆಗಳನ್ನು ಕಟ್ಟಿಕೊಂಡಿದ್ದಾರೆ ಇವರಿಗೆ ಅವಕಾಶ ಮಾಡಿಕೊಡಬೇಕು ಎನ್ನುವ ಮನವಿಯನ್ನು ತಮ್ಮ ಮುಖಾಂತರ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಕೆಲವು ನಿದರ್ಶನಗಳನ್ನು ತಾವೇನು ಕೊಟ್ಟಿದ್ದೀರಿ ಅದರ ಬಗ್ಗೆ ವಿಚಾರಣೆ ಮಾಡಿಸುತ್ತೇನೆ. ಬಿ.ಡಿ.ಎ. ನವರು ಈಗಾಗಲೇ 3,500 ಸೈಟುಗಳನ್ನು ಬಡತನ ರೇಖೆಯಿಂದ ಕೆಳಗಡೆ ಇರತಕ್ಕಂಥವರಿಗೆ ಕೊಟ್ಟಿದ್ದಾರೆ. ಇದು ಪ್ರಶಂಸನಾರ್ಹವಾದ ಕಾರ್ಯವನ್ನು ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ಮತ್ತೊಮ್ಮೆ ನಾನು ಹೇಳುತ್ತೇನೆ.

ಅಧ್ಯಕ್ಷರು: ಇನ್ನು ಸಾಕು ಮಾಡೋಣ, ಈ ವಿಷಯವನ್ನು ಸನ್ಮಾನ್ಯ ಸದಸ್ಯರ ಹಾಗೂ ಸರ್ಕಾರದ ಅಭಿಪ್ರಾಯಗಳನ್ನು ನಾನು ಆಲಿಸಿದ್ದೇನೆ. ಈ ವಿಷಯ ನಿಲುವಳಿ ಸೂಚನೆ ಮೂಲಕ ಚರ್ಚೆಗೆ ತೆಗೆದುಕೊಳ್ಳುವುದು ಸೂಕ್ತವಾದ ವಿಷಯ ಆಗಿರದ ಕಾರಣ ನಿಲುವಳಿ ಸೂಚನೆ ಮೂಲಕ ಚರ್ಚಿಸಲು ನನ್ನ ಅನುಮತಿಯನ್ನು ನಿರಾಕರಿಸಿದ್ದೇನೆ. ಈಗ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಇದೆ ಮತ್ತು ಅಲ್ಲಿ ಬಹಳ ಮುಖ್ಯವಾದ ವಿಷಯಗಳ ಬಗ್ಗೆ ಮಾತನಾಡಬೇಕಾಗಿದೆ. ಆದ್ದರಿಂದ ಈಗ ಸಭೆಯನ್ನು ಮುಂದೂಡಲಾಗಿದ್ದು ಪುನಃ ಎರಡೂಮುಕ್ಕಾಲು ಗಂಟೆಗೆ ಸೇರೋಣ.

(1ಗಂಟೆ 39ನಿಮಿಷಕ್ಕೆ ಸದನ ಮುಕ್ತಾಯಗೊಂಡು ಪುನಃ2 ಗಂಟೆ 45 ನಿಮಿಷಕ್ಕೆ ಸೇರಲು ನಿಶ್ಚಯಿಸಲಾಯಿತು).

(ಸಭೆಯು ಮತ್ತೆ 3-20ಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪನವರು ಪೀಠವನ್ನು ಅಲಂಕರಿಸಿದರು.)

ಆ) ಗ್ರಾಮ ಪಂಚಾಯಿತಿ ಚುನಾವಣೆ ನಡೆದ ಮೇಲೆ ರಾಜ್ಯ ಕೆಲವು ಕಡೆಗಳಲ್ಲಿ ಗಲಭೆ ನಡೆಯುತ್ತಿರುವ ಬಗ್ಗೆ.

ಶ್ರೀ ಡಿ.ವಿ.ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ನಾನು ತಮ್ಮಜೊತೆ ಮಾತನಾಡಿದ ರೀತಿಯಲ್ಲಿ ನಾಳೆ ಬೆಳಿಗ್ಗೆ ಅದನ್ನು ಪ್ರಸ್ತಾಪ ಮಾಡುವುದರ ಮುಖಾಂತರ ಅದರ ಬಗ್ಗೆ ಸನ್ಮಾನ್ಯ

ಮಂತ್ರಿಗಳನ್ನು ಕೂಡ ಕೇಳಿದೆ. ಅವರು ಮೇಲ್ಮನೆಗೆ ಹೋಗಬೇಕಾಗಿರುವುದರಿಂದ ನಾಳೆ ಬೆಳಿಗ್ಗೆ ಅದರ ಬಗ್ಗೆ ಪ್ರಸ್ತಾಪವನ್ನು ಶುರುಮಾಡುತ್ತೇನೆ.

ಶ್ರೀ ಪಿ.ಜಿ. ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ಉಪನಾಯಕರು ಏನೊಂದು ವಿಚಾರವನ್ನು ಪ್ರಸ್ತಾಪಮಾಡಬೇಕೆಂದು ಇದ್ದಾರೆ. ಇದಲ್ಲದೆ ರಾಜ್ಯದಲ್ಲಿ ಅನೇಕ ಘಟನಾವಳಿಗಳೂ ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟಹಾಗೆ ನಡೆದಿವೆ. ಇವನ್ನೆಲ್ಲಾ ಪ್ರಸ್ತಾಪ ನಾವು ತುರ್ತಾಗಿ ಮಾಡಬೇಕಾಗಿದೆ. ಸರ್ಕಾರ ಇದರ ಬಗ್ಗೆ ಏಕೆ ಗಮನಿಸಿಲ್ಲ ಎಂದು ಗೊತ್ತಾಗುತ್ತಿಲ್ಲ ವಿಷಯ ಇವರ ಕೈತಪ್ಪಿದಂತೆ ಕಾಣುತ್ತಾ ಇದೆ.

ಅಧ್ಯಕ್ಷರು : ಇಲ್ಲ. ಇಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಎಲ್ಲಾಕಡೆಗಳಲ್ಲೂ ರಾಜ್ಯದಲ್ಲಿ ನಡೆಯುತ್ತಿದೆ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಗೃಹ ಇಲಾಖೆಗೆ ಸಂಬಂಧಪಟ್ಟಹಾಗೆ ಡಿಮ್ಯಾಂಡ್ ಮೇಲೆ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಬೆಸಿಯಲ್ಲಿ ಮಾತನಾಡಿದ ಹಾಗೆ ಈ ಅಧಿವೇಶನದಲ್ಲಿ ಹೋಂಡಿಪಾರ್ಟ್‌ಮೆಂಟ್ ವಿಚಾರ ಎಲ್ಲಿ ಬರುತ್ತದೆ ಸಾರ್. ಆದ್ದರಿಂದ ನಾಳೆ ನಮಗೆ ವಿರೋಧ ಪಕ್ಷದ ನಾಯಕರು ಮುಂಡಿಸಿರುವ ವಿಚಾರದಲ್ಲಿ ನಮಗೆಲ್ಲಾ ದಯಮಾಡಿ ಅವಕಾಶ ಮಾಡಿಕೊಡಬೇಕು ಎಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಬಹಳ ಮಹತ್ವದ ವಿಚಾರಗಳು ಇವೆ ಈಗ ಬೀದರ್‌ದು. ಅವರ ಭಾಗದಲ್ಲೇ ಜಾಸ್ತಿಯಾಗುತ್ತಿದೆ.

Mr.SPEAKER: Only with regard to a particulars subject you can raise, but how can there be a general discussion on that?

ಶ್ರೀ ಪಿ.ಜಿ.ಆರ್. ಸಿಂಧ್ಯ :- ಜನರಲ್ ಡಿಸ್ಕಷನ್ ಬೇಡ ಸಾರ್.

SRI.C.BYREGOWDA: We are not demanding general discussion. In the State ಕೆಲವು ಕಡೆ ಘಟನಾವಳಿಗಳು ನಡೆದಿವೆ. ಹಿಂದೆ ಈ ರಾಜ್ಯದಲ್ಲಿ ಯಾವತ್ತೂ ಕೂಡ ಆ ರೀತಿ ಘಟನಾವಳಿಗಳು ನಡೆದಿಲ್ಲ. It is going to be restricted to certain incidents only.

ಶ್ರೀ ಡಿ.ವಿ.ಸದಾನಂದಗೌಡ : (ಪುತ್ತೂರು) ಮಾನ್ಯ ಅಧ್ಯಕ್ಷರೇ, ನಾವು ಈಗ ಕೇಳಿದ್ದು ಏನೆಂದರೆ ಹಲವಾರು ಕಡೆಗಳಲ್ಲಿ ಮೊನ್ನೆ ಗ್ರಾಮಪಂಚಾಯಿತಿ ಚುನಾವಣೆನಂತರ ಈಗಿರುವಂಥ ಸರ್ಕಾರಕ್ಕೆ ಸಾಕಷ್ಟು ಗ್ರಾಮಪಂಚಾಯಿತಿ ಚುನಾವಣೆಗಳಲ್ಲಿ ಬಹುಮತ ಬರಲಿಲ್ಲ ಎಂದು ಹೇಳಿದ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ನಾವು ಆಡಳಿತ ಮಾಡುತ್ತೇವೆ ಎಂದು ಹೇಳುವ ಒಂದು ಸಂಗತಿಯನ್ನು ಅವರ ಕೈಗೆತ್ತಿಕೊಂಡು ರಾಜ್ಯಾದ್ಯಂತ ಬೇರೆ ಬೇರೆ ಕಡೆಗಳಲ್ಲಿ ಗಲಭೆ ಹಾಗೂ ಇಂಥ ಸಂಗತಿಗಳು ಎರಡು ಮೂರು ಕಡೆಗಳಲ್ಲಿ ನಡೆದಿರುವ ಬಗ್ಗೆ ನಾವು ನೋಡುತ್ತಿದ್ದೇವೆ. ಇದರ ಬಗ್ಗೆ ನಿರ್ದಿಷ್ಟ ವಿಚಾರಗಳನ್ನು ತಮ್ಮ ಗಮನಕ್ಕೆ ತಂದು ಇದನ್ನು ರೈಸ್ ಮಾಡಬೇಕೆಂದು ತಮ್ಮ ಮುಂದೆ

ಇಟ್ಟಿದ್ದೆವು. ಆದರೆ ಅನಿವಾರ್ಯವಾಗಿ ನಮ್ಮ ಗೃಹಮಂತ್ರಿಗಳು ಮೇಲ್ಮನೆಗೆ ಹೋಗಬೇಕಾಗಿದೆ. ಮೇಲ್ಮನೆಯಲ್ಲೂ ನಿಲುವಳಿ ಸೂಚನೆಯನ್ನು ತಂದಿದದಾರೆಂದು ಹೇಳುವ ಹಿನ್ನೆಲೆಯನಲ್ಲಿ ನಾವು ತಮ್ಮಲ್ಲಿ ಚರ್ಚೆಮಾಡಿ ನಾಳೆ ಬೆಳಿಗ್ಗೆ ಇದನ್ನು ತರಬೇಕು ಎಂದು ಇದ್ದೇವೆ.

ಅಧ್ಯಕ್ಷರು : ನಾಳೆ ಬೆಳಿಗ್ಗೆಯಾಗಲಿ. ಆದರೆ, ಸಬ್ಜೆಕ್ಟ್ ಮಾತ್ರ ನೀವು ಯಾವ ಟೈಪ್ ನೋಟೀಸ್ ಕೊಡುತ್ತೀರೋ ನಮ್ಮ ನಿಯಮಾವಳಿ ಪ್ರಕಾರ ಮಾಡುತ್ತೇವೆ.

ಶ್ರೀ ಡಿ.ವಿ.ಸದಾನಂದಗೌಡ:- ಅದು ಅಧ್ಯಕ್ಷರ ವಿವೇಚನೆಗೆ ಬಿಟ್ಟಿದ್ದು. ತಮ್ಮ ಕಾನೂನಿನ ಚೌಕಟ್ಟಿನಲ್ಲಿ ತಾವೇನು ತೀರ್ಪನ್ನು ಕೊಡುತ್ತೀರೋ ಅದಕ್ಕೆ ನಾವು ಬದ್ದರಿದ್ದೇವೆ. ತಮ್ಮ ಬಗ್ಗೆ ಅಪಾರವಾದ ಗೌರವ ಇದೆ. ಅದರ ಬಗ್ಗೆ ಎರಡು ಮಾತಿಲ್ಲ. ನಾಳೆ ಬೆಳಿಗ್ಗೆ ಅದಕ್ಕೆ ವಿಶೇಷವಾಗಿ ನಮಗೆ ಅವಕಾಶ ಮಾಡಿಕೊಡಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- (ಮಾನ್ಯ ಗೃಹ ಸಚಿವರು):- ನಮ್ಮ ಆಭ್ಯಂತರವೇನೂ ಇಲ್ಲ. ಈಗಲೇ ಆದರೆ ಈಗಲೇ ಚರ್ಚೆಗೆ ತೆಗೆದುಕೊಳ್ಳಿ. ನಾಳೆ ಬೇಕಾದರೆ ನಾಳೆ ಚರ್ಚೆಗೆ ತೆಗೆದುಕೊಳ್ಳಿ.

ಶ್ರೀ ಡಿ.ವಿ.ಸದಾನಂದಗೌಡ:- ನಮ್ಮ ಗೃಹ ಮಂತ್ರಿಗಳ ಬಗ್ಗೆ ನಮಗೆ ಅಪಾರ ಗೌರವವಿದೆ. ಯಾವುದೇ ಸಂದರ್ಭದಲ್ಲೂ ಅವರಿಗೆ ಉತ್ತರ ಕೊಡುವುದಕ್ಕೆ ಅಷ್ಟು ಸಾಮರ್ಥ್ಯವಿದೆ. ಅದನ್ನು ನಾನು ಇಲ್ಲ ಎಂದು ಹೇಳುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಸಾಮರ್ಥ್ಯದ ಪ್ರಶ್ನೆಯಲ್ಲ. ನನ್ನ ಹತ್ತಿರ ಮಾಹಿತಿ ಇಲ್ಲವೆಂದರೆ ತರಿಸಿಕೊಡುತ್ತೇನೆ ಎಂದು ಹೇಳುತ್ತೇನೆ. ಚರ್ಚೆಗೆ ಅಡ್ಡಿಮಾಡುವುದಿಲ್ಲ ಎಂದು ಹೇಳಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಈಗ ನಾವೇನು ಪ್ರಸ್ತಾಪಮಾಡಿದ್ದೇವೆಂದರೆ ರಾಜ್ಯದ ಕಾನೂನಿನ ಸಂರಕ್ಷಣೆಯ ದೃಷ್ಟಿಯಿಂದಾಗಿ ಎಲ್ಲೋ ಒಂದು ಕಡೆ ಎಡವಿದ್ದೇವೆ ಎನ್ನುವುದು ನಿರ್ವಿವಾದವಾಗಿರುವ ವಿಚಾರ. ಬಿ ಡಿ ಎ ಡಿಮಾಲಿಷನ್ ಬಗ್ಗೆ ನಾವು ಮಾತನಾಡಬಹುದಾಗಿತ್ತು ಎಷ್ಟೊಂದು ದೀರ್ಘವಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು. ಬೆಂಗಳೂರಿನಲ್ಲಿ ಸುಮಾರು ಒಂದು ಲಕ್ಷ ಜನರು ಭಯಭೀತರಾಗಿದ್ದರು. ಅವರ ಭರವಸೆಯಿಂದ ಈಗ ಸ್ವಲ್ಪ ಅವರು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ವಿವೇಚನಾಭರಿತವಾದ ಒಂದು ಹೇಳಿಕೆಯನ್ನು ತಾವು ಮುಖ್ಯಮಂತ್ರಿಗಳಿಂದ ಕೊಡಿಸಿದ್ದೀರಿ. ಅದೇ ರೀತಿ ಇಡೀ ರಾಜ್ಯಾದ್ಯಂತ ಈ ಘಟನೆಗಳು ಆಗುತ್ತಿವೆ. ತಾವು ಪತ್ರಿಕೆಗಳನ್ನು ತೆಗೆದುನೋಡಿ. ಪ್ರತಿನಿತ್ಯವೂ ಸಹಿತ ಒಂದಲ್ಲ ಒಂದು ಕಡೆ ದಾಂಧಲೆ, ಗಲಭೆ ಇವೆಲ್ಲಾ ಆಗುತ್ತಿವೆ. ಆಡಳಿತ ಪಕ್ಷದ ಸದಸ್ಯರು ಸಹಿತ ಇದರ ಬಗ್ಗೆ ಕಳಕಳಿಯನ್ನು ವ್ಯಕ್ತಮಾಡಿದ್ದಾರೆ. ನಾವು ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಿಹಾಕಬೇಕು. ಏನೋ ಅವರಿಗೆ ಮಾಡಬೇಕು ಎನ್ನುವ ದೃಷ್ಟಿಯಿಂದ ಅಲ್ಲ. ವಿಧಾನಸಭೆ ನಡೆಯುವ ಸಂದರ್ಭದಲ್ಲಿ ಹೇಳಲೇಬೇಕಾಗಿದೆ. ಈಗ ಬೀದರ್‌ನಲ್ಲಿ ಒಂದು ಮಗು ನಾಪತ್ತೆಯಾಗಿತ್ತು. ಅದರ ಕೊಲೆಯಾಗಿದೆ. ಈ ರೀತಿ ಅನೇಕ ಪ್ರಕರಣಗಳಿಂದ ಕಾನೂನು ಪರಿಸ್ಥಿತಿ ಉಲ್ಬಣವಾಗಿರಿವುದು ನಮಗೆ ಗೊತ್ತಿದೆ. ಅದರಿಂದ ರೂಲ್ 69 ರ ಕೆಳಗೆ ಮಾತನಾಡುವುದಕ್ಕೆ ಅವಕಾಶ ಇದೆ. ಅದನ್ನಾದರೂ ತಾವು ನಾಳೆ ಬೆಳಿಗ್ಗೆ ಮಾಡಿಕೊಡಿ. ಇಲ್ಲದಿದ್ದರೆ ಈ ನಿಯಮಾವಳಿಗಳ ಜೊತೆಗೆ ವಿಶೇಷವಾಗಿ ತಾವು ಅನೇಕ ಸಂದರ್ಭದಲ್ಲಿ ಚರ್ಚೆಗೆ ಅವಕಾಶ ಮಾಡಿದ್ದೀರಿ. ತಾವು

ಅಧ್ಯಕ್ಷರಾದಮೇಲೆ ಅನೇಕ ಸಂದರ್ಭದಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಿ. ಅದರಿಂಗಾಗಿ ಈ ನಿಯಾಮಾವಳಿಗಳ ಅನುಸಾರವಾಗಿಯೇ ಮಾಡಿ. ಅಥವಾ ರಾಜ್ಯದ ಹಿತದೃಷ್ಟಿಯಿಂದಾಗಿ ನಾವು ಕೆಲವು ವಿಚಾರಗಳನ್ನು ಹೇಳಬೇಕು. ಜನಗಳಿಗೆ ಗೊತ್ತಾಗಬೇಕು ಈಗ ಅಸ್ಸೋಟಿಕರ್ ಕೊಲೆ ವಿಚಾರದಲ್ಲಿ ನಮ್ಮ ಪೋಲೀಸ್‌ನವರು ಒಳ್ಳೆಯ ಕೆಲಸ ಮಾಡಿದ್ದಾರೆ. ಅದನ್ನು ನಾವು ಪ್ರಶಂಸೆ ಮಾಡುತ್ತೇವೆ. ಅದಕ್ಕೋಸ್ಕರ ನಾವು ಸಿಬಿಐ ಬೇಡ, ನಮ್ಮ ಪೋಲೀಸ್‌ನವರೇ ಮಾಡುತ್ತಾರೆ ಎಂದು ಹೇಳಿದ್ದೆವು. We appreciated that. ಅದೇ ರೀತಿಯಲ್ಲಿthere are many aspects which we want to focus through this House. ತಾವು ರೂಲ್ 69ರಲ್ಲಿ ಅಥವಾ ಅಡ್ಜರ್ನಮೆಂಟ್ ಮೋಷನ್ ಆಲೋ ಮಾಡುವುದಾದರೆ ನಮಗೆ ಬಹಳ ಸಂತೋಷ. ಅದೇನಾಗುತ್ತದೆ ಎಂದರೆ ಒಂದು ಸಬ್ಜೆಕ್ಟ್ ಇದೆ ಬೂಕನಕೆರೆ, ಕೆ.ಆರ್. ಪೇಟೆಯಲ್ಲಿ ಆಗಿರುವ ಇನ್‌ಸಿಡೆಂಟ್. ಅದನ್ನು ಮಾತ್ರ ಹೇಳಬಹುದು. ಪ್ರಾಸ್ತಾವಿಕವಾಗಿ ನಾವು ಪ್ರಸ್ತಾಪಮಾಡಬಹುದೇ ವಿನಹಃ ಎಲ್ಲಾ ಇನ್‌ಸಿದಡೆಂಟ್‌ಗಳನ್ನೂ ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಅಡ್ಜರ್ನಮೆಂಟ್ ಮೋಷನ್ ಪ್ರಕಾರ ಪರ್ಟಿಕ್ಯುಲರ್ ಇಸ್ಯೂ ಮೇಲೆಯೇ ಮಾತನಾಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ತಾವು ವಿಶೇಷವಾಗಿ ರಾಜ್ಯದಲ್ಲಿ ಕಾನೂನಿನ ಪರಿಸ್ಥಿತಿ ಹದಗೆಟ್ಟಿರುವುದರಿಂದ ನಿಯಮ 69 ರ ಅಡಿಯಲ್ಲಿ ದಯಮಾಡಿ ನಮಗೆಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಗೃಹಮಂತ್ರಿಗಳೂ ಒಪ್ಪಿದ್ದಾರೆ. ತಾವು ಕೂಡ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಆಯಿತು.

ಶ್ರೀ ಎನ್. ಚಲುವರಾಯಸ್ವಾಮಿ:- ಮಾನ್ಯ ಅಧ್ಯಕ್ಷರೇ, ಪರ್ಟಿಕ್ಯುಲರ್ ಆಗಿ ನಮ್ಮ ಜಿಲ್ಲೆಯಲ್ಲಿ ಎರಡು-ಮೂರು ಕಡೆ ಈ ರೀತಿಯಾಗಿರುವುದರಿಂದ ಇದರ ಬಗ್ಗೆ ಚರ್ಚೆಯಾಗಿ ಇದನ್ನು ಇನ್ನು ಮುಂದೆ ತಡೆಯುವುದಕ್ಕೋಸ್ಕರವಾದರೂ ಒಂದು ಒಳ್ಳೆಯ ವಾತಾವರಣ ಮುಂದೆ ಬರಬೇಕು ಎನ್ನುವ ದೃಷ್ಟಿಯಿಂದ ಅವಕಾಶ ಮಾಡಿಕೊಟ್ಟು ಸರ್ಕಾರದ ಗಮನ ಸೆಳೆಯುವ ಬಗ್ಗೆ ನಮ್ಮ ಹಿತದೃಷ್ಟಿಯನ್ನು ತಾವು ಆರ್ಥಮಾಡಿಕೊಂಡು ನಮಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಸಿ.ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ಕೆ.ಆರ್.ಪೇಟೆಯಲ್ಲಿ ಏನು ಪ್ರಕರಣ ವಾಗಿ ಅದರ ಬಗ್ಗೆ ತಮ್ಮ ಮುಖಾಂತರ ನಮ್ಮ ಗೃಹಸಚಿವರಲ್ಲಿ ನಾನು ವಿನಂತಿ ಮಾಡುತ್ತೇನೆ, ಅದನ್ನು ಸಂಪೂರ್ಣವಾಗಿ ಸಿ.ಓ.ಡಿ. ಗೆ ಒಪ್ಪಿಸಿ ಏನು ಇವತ್ತು ಅನ್ಯಾಯವಾಗಿದೆ. ಆ ಜನರಿಗೆ ಅನುಕೂಲ ಮಾಡಿಕೊಟ್ಟು ಅಲ್ಲಿ ಶಾಂತಿ ವಾತಾವರಣ ಮೂಡುವ ಹಾಗೆ ತಾವು ಇದರ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಎಂ.ಎಸ್.ಆತ್ಮಾನಂದ:- ಮಾನ್ಯ ಅಧ್ಯಕ್ಷರೆ, ಆನ್‌ಸ್ಟಾರ್ಡ್ ಕ್ವೊಶ್ಚನ್‌ಗೆ ರಿಪ್ಲೈ ಸಿಗುತ್ತಿಲ್ಲ.

ಅಧ್ಯಕ್ಷರು: ಈಗ 100 ಪ್ರಶ್ನೆಗಳಿಗೆ ಉತ್ತರ ಬಂದಿದೆಯಂತೆ. ಸಿಬ್ಬಂದಿ ಸ್ವಲ್ಪ ಕಡಿಮೆ ಇದ್ದಾರೆ. ಅದಷ್ಟು ಬೇಗ ತಮಗೆಲ್ಲಾ ತಲುಪಿಸುತ್ತಾರೆ.